# ವ್ಯಾಕರಣ ವಿಭಾಗ



## ವ್ಯಾಕರಣ

### ಸರ್ವನಾಮಗಳು

ನಾಮಪದದ ಬದಲಾಗಿ ಬಳಿಸುವ ಪದಗಳಿಗೆ ಸರ್ವನಾಮಗಳೆಂದು ಕರೆಯುವರು.

ಉದಾ- ನಾನು, ನೀನು, ಅವನು, ಅವಳು, ಅದು, ಇದು, ತಾನು, ತಾವು, ಇತ ಸರ್ವನಾಮಗಳಲ್ಲಿ ಮೂರು ವಿಧಗಳು.

1) ಪುರುಷಾರ್ಥಕ ಸರ್ವನಾಮ
2) ಪ್ರಶ್ನಾರ್ಥಕ ಸರ್ವನಾಮ
3) ಆತ್ಮಾರ್ಥಕ ಸರ್ವನಾಮ

1) **ಪುರುಷಾರ್ಥಕ ಸರ್ವನಾಮ:-** ನಾನು, ನಾವು, ನೀನು, ನೀವು, ಇವನು, ಇವಳು, ಇದು, ಇವು, ಅವನು, ಅವಳು, ಅದು, ಇತ್ಯಾದಿ.

2) **ಪ್ರಶ್ನಾರ್ಥಕ ಸರ್ವನಾಮ:-** ಯಾರು, ಯಾವುದು, ಏನು, ಏತರದು, ಯಾವನು, ಯಾವಳು ಇತ್ಯಾದಿ.

3) **ಆತ್ಮಾರ್ಥಕ ಸರ್ವನಾಮ:-** ತಾವು, ತಾನು, ತನ್ನ ಮೊದಲಾದವುಗಳು

### ವಿಶೇಷಣ

ಯಾವುದಾದರೊಂದು ವಸ್ತು, ವ್ಯಕ್ತಿ ಮೊದಲಾದವುಗಳು ಗುಣ, ಬಣ್ಣಗಾತ್ರ ಇತ್ಯಾದಿಗಳನ್ನು ಹೇಳುವ ಪದಗಳಿಗೆ ವಿಶೇಷಣಗಳು ಎಂದು ಕರೆಯುತ್ತಾರೆ.

ಇದರಲ್ಲಿ **ಗುಣವಾಚಕ, ಪರಿಮಾಣವಾಚಕ** ಹಾಗೂ **ಸಂಖ್ಯಾವಾಚಕ** ವಿಶೇಷಣಗಳೆಂದು 3 ಪ್ರಕಾರಗಳುಂಟು.

1) **ಗುಣವಾಚಕ:-** ಯಾವುದೇ ಒಂದು ವಸ್ತು ಅಥವಾ ವ್ಯಕ್ತಿಯ ಗುಣ ಸೂಚಿಸುವುದಕ್ಕೆ ಗುಣವಾಚಕ ಎನ್ನುವರು.

ಉದಾ: ಸುಂದರವಾದ ಕಟ್ಟಡ
ಒಳ್ಳೆಯ ಸ್ನೇಹಿತ
ಇಂಪಾದ ಸ್ವರ
ತಂಪಾದ ಗಾಳಿ

2) **ಪರಿಮಾಣವಾಚಕ:-** ಯಾವುದೇ ಒಂದು ವಸ್ತುವಿನ ಅಥವಾ ವಕ್ತಿಯ ಪ್ರಮಾಣವನ್ನು ಸೂಚಿಸುವುದಕ್ಕೆ ಪರಿಮಾಣವಾಚಕ ಎನ್ನುವರು

ಉದಾ.: ಚಿಕ್ಕ ಮಗು
ದೊಡ್ಡ ಶಾಲೆ
ಕಿರಿಯ ಮಗಳು

3) **ಸಂಖ್ಯಾವಾಚಕ:-** ವ್ಯಕ್ತಿ ಅಥವಾ ವಸ್ತುವಿನ ಸಂಖ್ಯೆಯನ್ನು ಸೂಚಿಸುವುದೇ ಸಂಖ್ಯಾವಾಚಕ ವಿಶೇಷಣವಾಗಿದೆ.

ಉದಾ.: ಹತ್ತು ಕೈಗಳು
ಒಂದು ತಲೆ
ಇಪ್ಪತ್ತು ಆಕಳುಗಳು
ನಾಲ್ಕು ಕರುಗಳು

**ವಿಭಕ್ತಿ ಪ್ರತ್ಯಯಗಳು**

ನಾಮಪ್ರಕೃತಿಗಳ ಮುಂದೆ ಸೇರಿಕೊಂಡು ಬೇರೆ ಬೇರೆ ಅಥವಾ ಉಂಟುಮಾಡುವ ಪ್ರತ್ಯಯಗಳಿಗೆ 'ವಿಭಕ್ತಿ ಪ್ರತ್ಯಯ' ಎಂದು ಹೆಸರು ವಿಭಕ್ತಿ ಪ್ರತ್ಯಯಗಳಲ್ಲಿ ಒಟ್ಟು 8 ಪ್ರಕಾರಗಳಿದ್ದು ಅವುಗಳ ಪ್ರತ್ಯಯ ಹಾಗೂ ಉದಾಹರಣೆಗಳು ಈ ಕೆಳಗಿನಂತಿವೆ.

| ವಿಭಕ್ತಿ | ಪ್ರತ್ಯಯ | ಉದಾಹರಣೆ |
|---|---|---|
| ಪ್ರಥಮಾ | ಉ | ರಾಮನು |
| ದ್ವಿತೀಯ | ಅನ್ನು | ರಾಮನನ್ನು |
| ತೃತೀಯಾ | ಇಂದ | ರಾಮನಿಂದ |
| ಚತುರ್ಥಿ | ಗೆ, ಇಗೆ, ಅಕ್ಕೆ | ರಾಮನಿಗೆ |
| ಪಂಚಮಿ | ದೆಸೆಯಿಂದ | ರಾಮನಿಂದ |
| ಷಷ್ಠೀ | ಅ | ರಾಮನ |
| ಸಪ್ತಮಿ | ಅಲ್ಲ | ರಾಮನಲ್ಲಿ |
| ಸಂಬೋಧನೆ | ಏ, ಇರು | ರಾಮನೇ |

**ವಾಕ್ಯ ಪ್ರಕಾರಗಳು**

ವಾಕ್ಯರಚನಾ ವಿವರ: ಕ್ರಮವತ್ತದ ಪದಗಳ ಮತ್ತು ಪೂರ್ಣ ಅರ್ಥಕೊಡುವ ಸಂಯೋಜಿತ ರಚನೆಯೇ ವಾಕ್ಯ, ನಿಖರ, ಸ್ಪಷ್ಟ ಹಾಗೂ ಪೂರ್ಣ ಅರ್ಥಕೊಡುವ ವ್ಯಾಕರಣದ ರಚನೆಯಿದು.

ಉದಾ: 1) ವಿಜಯನು ಊರಿಗೆ ಹೋದನು
2) ಗಂಗೆಯು ನೀರನ್ನು ತಂದಳು

**ವಾಕ್ಯ ಪ್ರಕಾರಗಳು:**

ವಾಕ್ಯಗಳಲ್ಲಿ **ಸರಳ ವಾಕ್ಯ**, **ಸಂಯುಕ್ತ ವಾಕ್ಯ** ಹಾಗೂ **ಸಂಕೀರ್ಣ** (ಮಿಶ್ರ) ವಾಕ್ಯ ಎಂದು ವಿಂಗಡಿಸಲಾಗಿದೆ.

**ಸರಳ ವಾಕ್ಯ:** ಒಂದು ಕ್ರಿಯಾ ಪದದೊಡನೆ ಸ್ವತಂತ್ರವಾದ, ಖಚಿತ ಅರ್ಥಕೊಡುವ ವಾಕ್ಯರಚನೆಗೆ ಸರಳ ವಾಕ್ಯವೆನ್ನುವರು.

ಉದಾ: 1) ಅಜ್ಜಿಯು ಕಥೆಯನ್ನು ಹೇಳುತ್ತಾಳೆ

2) ಬೆಕ್ಕು ಹಾಲನ್ನು ಕುಡಿಯುತ್ತದೆ

**ಸಂಯುಕ್ತ ವಾಕ್ಯ:** ಎರಡು ಅಥವಾ ಅನೇಕ ವಾಕ್ಯಗಳು ಒಟ್ಟಾಗಿ ಸೇರಿ ಪೂರ್ಣ ಅರ್ಥವನ್ನು ನೀಡುವುದಕ್ಕೆ ಸಂಯುಕ್ತ ವಾಕ್ಯ ಎನ್ನುವರು ಇದರಲ್ಲಿ ಎರಡು ಪೂರ್ಣ ಕ್ರಿಯಾಪದಗಳಿರುತ್ತವೆ.

ಉದಾ: 1) ನಾವು ಸಾಕಷ್ಟು ಹಣ ತೆಗೆದುಕೊಂಡು ಹೋಗಿರುವುದರಿಂದ ಆ ವಸ್ತುವನ್ನು ಖರೀದಿಸಲಿಕ್ಕಾಗಲಿಲ್ಲ

2) ಅವನು ಚೆನ್ನಾಗಿ ಆಟ ಆಡಲಿಲ್ಲ, ಆದರೂ ಪಂದ್ಯವನ್ನು ಗೆದ್ದನು.

**ಸಂಕೀರ್ಣ (ಮಿಶ್ರ) ವಾಕ್ಯ:** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಆಧೀನವಾಗಿರುವುದಕ್ಕೆ ಸಂಕೀರ್ಣ ವಾಕ್ಯವೆನ್ನುತ್ತಾರೆ. ಇದರಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಅಪೂರ್ಣ ಕ್ರಿಯಾಪದಗಳಿರುತ್ತವೆ.

ಉದಾ: 1) ಪುಟ್ಟನು ಬಾಳೆಹಣ್ಣನ್ನು ತಿಂದು ಸಿಪ್ಪೆಯನ್ನು ಕಸದಬುಟ್ಟಿಗೆ ಹಾಕಿದನು.

2) ಸೀತೆಯು ನಾಡನ್ನು ಬಿಟ್ಟು ಕಾಡಿಗೆ ಹೋದಳು

**ಪಡೆನುಡಿಗಳು**

ಹಲವು ವಾಕ್ಯಾಂಶಗಳು ತಮ್ಮ ಸಾಮಾನ್ಯ ಅರ್ಥವನ್ನು ಬಿಟ್ಟು ವಿಶೇಷ ಅರ್ಥವನ್ನು ಪ್ರಕಟಿಸುತ್ತವೆ. ಇಂತಹ ವಾಕ್ಯಾಂಶಗಳಿಗೆ 'ಪಡೆನುಡಿ' ಎನ್ನುವರು. ಪಡೆನುಡಿಗಳು ಭಾಷೆಗೆ ಪ್ರೌಢತೆಯನ್ನು ಕೊಡುತ್ತವೆ. ಪಡೆನುಡಿಗಳನ್ನು ಬಳಸುವುದರಿಂದ ಭಾಷಾಜ್ಞಾನ ಶಬ್ದಸಂಪತ್ತು ಹೆಚ್ಚುವುದಲ್ಲದೆ ರಂಜಕತೆಯೂ ಕೂಡ ವೃದ್ಧಿಸುತ್ತದೆ.

ಪಡೆನುಡಿಗಳು, ಅವುಗಳ ಅರ್ಥ ಹಾಗೂ ವಾಕ್ಯಗಳಲ್ಲಿ ಅವುಗಳ ಪ್ರಯೋಗ.

1) ಕಾಲಿಗೆ ಬುದ್ಧಿ ಹೇಳು = ಓಡಿಹೋಗು
ಬೆಕ್ಕನ್ನು ಕಂಡ ಕೂಡಲೇ ಇಲಿಯು ಕಾಲಿಗೆ ಬುದ್ಧಿ ಹೇಳಿತು.

2) ಕೈ ಕಟ್ಟಿ ಕೂಡು = ಚಿಂತಿಸು ವ್ಯರ್ಥಕೂಡು.
ದುಡ್ಡನ್ನು ಕಳೆದುಕೊಂಡ ಹುಡುಗನು ಕೈ ಕಟ್ಟಿ ಕುಳಿತುಕೊಂಡನು.

3) ಬೆಕ್ಕಸಬೇರಗಾಗು = ಗಾಬರಿಯಾಗು, ಆಶ್ಚರ್ಯಚಕಿತನಾಗು.
ಸಿಡಿಲಿನ ಶಬ್ದಕ್ಕೆ ಹಳ್ಳಿಯ ಜನ ಬೆಕ್ಕಸಬೆರಗಾದರು.

4) ಟೊಪ್ಪಿಗೆ ಹಾಕು = ಮೋಸಮಾಡು
ಕೆಲವೊಂದು ಸಲ ವ್ಯಾಪಾರಿಗಳು ಗ್ರಾಹಕರಿಗೆ ಟೊಪ್ಪಿಗೆ ಹಾಕಲು ಹೊಂಚ ಹಾಕುತ್ತಾರೆ

5) ಹುಬ್ಬುಗಂಟಿಕ್ಕು = ಸಿಟ್ಟಿಗೆ ಬರು
ಗೀತೆಯು ಹೇಳಿದ ವಸ್ತುವನ್ನು ತರದಿದ್ದಕ್ಕಾಗಿ ಅಪ್ಪನ ಮೇಲೆ ಹುಬ್ಬುಗಂಟಿಕ್ಕಿದ್ದಳು

## ನಿಬಂಧ ಬರಹ

ಓದುವುದು ಒಂದು ಕಲೆಯಾಗಿರುವಂತೆ ಬರೆಯುವುದೂ ಒಂದು ಕಲೆ. ಬರೆವಣಿಗೆಯಿಂದ ವಿದ್ಯಾರ್ಥಿಯ ಅರ್ಹತೆಯನ್ನು ಅಳೆಯಲಾಗುತ್ತದೆ. ಅದಕ್ಕಾಗಿ ವಿದ್ಯಾರ್ಥಿಗಳು ಹಲವಾರು ಪುಸ್ತಕಗಳನ್ನು ಓದಬೇಕಾಗುತ್ತದೆ. ಅಂದಾಗ ಮಾತ್ರ ಉತ್ತಮವಾದ ನಿಬಂಧವನ್ನು ಬರೆಯಲು ಸಾಧ್ಯವಾಗುತ್ತದೆ.

ನಿಬಂಧಗಳಲ್ಲಿ ಹಲವಾರು ಪ್ರಕಾರಗಳು.

1) ನಿರೂಪಣಾತ್ಮಕ

2) ವರ್ಣನಾತ್ಮಕ

3) ಕಥನಾತ್ಮಕ

4) ವೈಚಾರಿಕ

5) ಕಾಲ್ಪನಿಕ

6) ಆತ್ಮಕಥೆ

ನಿಬಂಧ

ಪರಿಸರ ಮಾಲಿನ್ಯ

ಕೊಟ್ಟ ಅಂಶಗಳ ಆಧಾರದಿಂದ ನಿಬಂಧ ರಚಿಸುವುದು.

- ನಮ್ಮ ಸುತ್ತಮುತ್ತಲಿನ ವಾತಾವರಣಕ್ಕೆ ಪರಿಸರ

- ಗಿಡ, ವಾಯು, ಜಲ, ಶಬ್ದ, ಸಸ್ಯ ಗಿರಿ, ಮೊದಲಾದವು

- ಭೌತಿಕ, ಭೌಗೋಲಿಕ, ಆರ್ಥಿಕ, ಸಾಮಾಜಿಕ, ಪರಿಸರಗಳೆಂದು

- ಪರಿಸರ ಮಾಲಿನ್ಯ, ಜಲ, ವಾಯು, ಶಬ್ದ

- ಕಾಡುಗಳ ನಾಶ

- ಅತಿವೃಷ್ಟಿ, ಅನಾವೃಷ್ಟಿ, ವಿಶ್ವತಾಪಮಾನ ಪರಿಸರ ಮಾಲಿನ್ಯಕ್ಕೆ ಕಾರಣಗಳು

- ಕಾರ್ಬನ, ವಾಹನಗಳು, ಮಿತಿಮೀರಿದ ಜನಸಂಖ್ಯೆ

ಪರಿಹಾರೋಪಾಯ

- ಗಿಡ, ಮರಗಳನ್ನು ನೆಡುವುದು
- ವಾಹನಗಳ ಮಿತವಾದ ಬಳಕೆ
- ಕಾರ್ಖಾನೆಗಳ ಹೊಗೆ ಹಾಗೂ ನೀರು ಪರಿಸರಕ್ಕೆ ಧಕ್ಕೆ ಯಾಗದಂತೆ ನೋಡಿಕೊಳ್ಳುವುದು
- ಸ್ವಚ್ಛತಾ ಅಭಿಯಾನ
- ರಾಸಾಯನಿಕ ಗೊಬ್ಬರ ಬಳಸದಿರುವುದು
- ಕ್ರಿಮಿನಾಶಕಗಳನ್ನು ದೂರೀಕರಿಸುವುದು

**ಕಥಾರಚನೆ**

ಕೊಟ್ಟ ಅಂಶಗಳ ಆಧಾರದಿಂದ ಕಥೆಯನ್ನು ರಚಿಸುವುದು

ಚಿನ್ನದ ಮೊಟ್ಟೆ ಇಡುವ ಕೋಳಿ

- ಒಂದೂರಿನಲ್ಲಿ ಒಬ್ಬ ಮನುಷ್ಯ
- ಕೋಳಿ ಸಾಕಿದ್ದು
- ಚಿನ್ನದ ಮೊಟ್ಟೆ ಇಡುತ್ತಿತ್ತು
- ಅತಿ ಆಸೆಯ ಮನುಷ್ಯನಲ್ಲಿ ಮೂಡಿದ ದುರಾಸೆ
- ಬೇಗನೆ ಶ್ರೀಮಂತ ನಾಗಬೇಕೆಂಬ ಆಸೆ
- ಕೋಳಿಯನ್ನು ಕೊಯ್ದದ್ದು
- ನಿರಾಶೆ ಯಾದದ್ದು
- ಅತಿ ಆಸೆ ಗತಿಗೇಡು

## ಪತ್ರಲೇಖನ

ಪ್ರಮುಖವಾಗಿ ಪತ್ರಲೇಖನದಲ್ಲಿ ಎರಡು ವಿಧಗಳು. ಔಪಚಾರಿಕ ಹಾಗೂ ಅನೌಪಚಾರಿಕ ಪತ್ರ. ಸಾಮಾನ್ಯವಾಗಿ ನಮ್ಮ ಕುಟುಂಬ, ಸ್ನೇಹಿತರು,ಸಂಬಂಧಿಕರು ಮುಂತಾದವರಿಗೆ ಬರೆಯುವ ಪತ್ರ ಅನೌಪಚಾರಿಕ ಪತ್ರ. ಮುಖ್ಯಾಧ್ಯಾಪಕರು, ವಿವಿಧ ಅಧಿಕಾರಿಗಳು, ಕಛೇರಿಗಳು, ಅಂಗಡಿಗಳು ಮುಂತಾದ ದೈನಂದಿನ ವ್ಯವಹಾರಕ್ಕಾಗಿ ಬರೆಯುವ ಪತ್ರಗಳಿಗೆ ಔಪಚಾರಿಕ ಪತ್ರಗಳೆನ್ನುವರು.

## ಪತ್ರಲೇಖನ

ಕೊಟ್ಟ ಅಂಶಗಳು ಆಧಾರದಿಂದ ಸಂಬಂಧಿಕರಿಗೆ/ಗೆಳೆಯನಿಗೆ ಪತ್ರ ಬರವಣಿಗೆ

ಇಂದ–
ರಮೇಶ

ಎಸ್‌ಬಿ ವಿದ್ಯಾಮಂದಿರ
ಮುಖ್ಯ ರಸ್ತೆ,
ವಿಜಯಪುರ

ಗೇ.....

- ತೀರ್ಥರೂಪ ತಂದೆ
- ವಿಜಯಪುರದಿಂದ ತಮ್ಮ ಮಗ
- ಕ್ಷೇಮ ಸಮಾಚಾರ
- ಶಾಲೋಪೋಗಿ ವಸ್ತುಗಳು
- ಸುಮಾರು 1000ರೂ
- 15 ದಿನಗಳಲ್ಲಿ
- ಎಲ್ಲರಿಗೂ ಸಮಸ್ಕಾರ

ತಮ್ಮ
ಪ್ರೀತಿಯ ಮಗ

ಗೇ..........

ಶ್ರೀ ಚಂದ್ರಶೇಖರ
ಗೌರಿಶಂಕರ ಗುಡಿಯ ಹತ್ತಿರ,
ಮುಖ್ಯ ಬೀದಿ,
ಬಾಗಲಕೋಟ.

## ಆಮಂತ್ರಣ ಪತ್ರಿಕೆ

ಆಮಂತ್ರಣ ಪತ್ರಿಕೆಗಳಲ್ಲಿ ಹಲವು ವಿಧ ಅದನ್ನು ಮುಖ್ಯವಾಗಿ ಮೂರು ಭಾಗಗಳಲ್ಲಿ ವಿಂಗಡಿಸಬಹುದು. ಅವು ವೈಯಕ್ತಿಕ, ಸಾಮಾಜಿಕ ಹಾಗೂ ವ್ಯವಹಾರಿಕ ಆಮಂತ್ರಣ ಪತ್ರಿಕೆಗಳು, ಆಯಾ ವ್ಯಕ್ತಿಗಳ ಸಂಬಂಧ, ಅವರು ನಡೆಸುವ ಕೌಟುಂಬಿಕ ಸಮಾರಂಭ ಇತ್ಯಾದಿಗಳು. ಉದಾ:- ವಿವಾಹ ಸಮಾರಂಭ, ಗೃಹ ಪ್ರವೇಶ, ಉಪನಯನ, ಇತ್ಯಾದಿ. ವ್ಯಾವಹಾರಿಕ ಆಮಂತ್ರಣ ಪತ್ರಿಕೆಗಳು ಅವನ್ನು ನಡೆಸುವವರನ್ನು ಅವಲಂಬಿಸಿರುತ್ತವೆ. ಇನ್ನು ಸಾಮಾಜಿಕಕ ಆಮಂತ್ರಣ ಪತ್ರಿಕೆಗಳು- ಊರಲ್ಲಿಯ ಜಾತ್ರೆ, ನಾಟಕ, ಸಾರ್ವಜನಿಕ ಕಾರ್ಯಕ್ರಮಗಳಿಗೆ ಆಯಾ ಸನ್ನಿವೇಶಗಳಿಗೆ ಅನ್ವಯಿಸುತ್ತವೆ. ಉದಾಹರಣೆಗೆ ಒಂದು ಮಾದರಿಯನ್ನು ಇಲ್ಲಿ ಕೊಡಲಾಗಿದೆ.

### ಆಮಂತ್ರಣ ಪತ್ರಿಕೆ

ನಿಮ್ಮ ಶಾಲೆಯಲ್ಲಿ ನಡೆಯುವ 10ನೇ ವರ್ಗ ವಿದ್ಯಾರ್ಥಿಗಳು ಬೀಳ್ಕೊಡುವ ಸಮಾರಂಭದ ಆಮಂತ್ರಣ ಪತ್ರಿಕೆಯನ್ನು ಸಿದ್ದಪಡಿಸಿರಿ.

ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘ
ಶ್ರೀ ಬಸವೇಶ್ವರ ಪ್ರೌಢ ಶಾಲೆ ಬಾಗಲಕೋಟ

ಮಹನೀಯರೇ ..............

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ನಮ್ಮ ಶಾಲೆಯ 10ನೇ ವರ್ಗ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭವನ್ನು ದಿನಾಂಕ 10/2/2017 ರಂದು ಬೆಳಿಗ್ಗೆ 10 ಗಂಟೆಗೆ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದೇವೆ. ಕಾರಣ ತಾವುಗಳು ಈ ಕಾರ್ಯಕ್ರಮಕ್ಕೆ ಆಗಮಿಸಿ ಶೋಭೆ ತರಬೇಕಾಗಿ ವಿನಂತಿ.

ಅಧ್ಯಕ್ಷರು:- ಸಂಸ್ಥೆಯ ಚೇಅರಮನ್ನರು

ಕೌರವ ಅತಿಥಿಗಳು- ಶ್ರೀ ಬಿ. ಪ್ರಾಣೇಶ (ಹಾಸ್ಯಕಲಾವಿದರು)
ಮುಖ್ಯ ಅತಿಥಿಗಳು- ಡಾ. ಗೋಪಾಲರಾವ್ (ಸಾಹಿತಿಗಳು)
ಡಾ. ಸುಮತಿ ನಾಯಕ


ದಿನಾಂಕ 10/2/2017 ಸಮಯ: ಬೆಳಿಗ್ಗೆ 10 ಗಂಟೆಗೆ

ಸ್ಥಳ: ಶಾಲೆಯ ಆವರಣ

''ಸರ್ವರಿಗೂ ಆದರದ ಸ್ವಾಗತ''

ಕೆ. ವಿಜಯರಾಜ
ವಿದ್ಯಾರ್ಥಿ ಪ್ರತಿನಿಧಿ


ಮುಖ್ಯಾಧ್ಯಾಪಕರು
ಶ್ರೀ ಬಸವೇಶ್ವರ ಪ್ರೌಢ ಶಾಲೆ
ಬಾಗಲಕೋಟ










































- पाठ्यपुस्तक मंडळाची वैशिष्ट्यपूर्ण पाठ्येत्तर प्रकाशने.
- नामवंत लेखक, कवी, विचारवंत यांच्या साहित्याचा समावेश.
- शालेय स्तरावर पूरक वाचनासाठी उपयुक्त.

पुस्तक मागणीसाठी www.ebalbharati.in, www.balbharati.in संकेत स्थळावर भेट द्या.

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

कन्नड सुगमभारती इ.१० वी (कन्नड भाषा) ₹42.00